ಬೊಗಸೆಗಣ್ಣಿನ ಅಂದವನ್ನು ಹೆಚ್ಚಿಸಿತ್ತು ತೆಳುಕಾಡಿಗೆ. 'ತನ್ನಲ್ಲಿ ಇದೆಂತಾ ಬದಲಾವಣೆ?' ಎಂದು ಅವಳಿಗೇ ಅಚ್ಚರಿಯಾಗುತ್ತಿತ್ತು. ಒಮ್ಮೆ ಕಣ್ಣಲ್ಲಿ ಕಣ್ಣಿಟ್ಟು ಎಂಬಂತೆ ನೋಡಿದ ಮಾತ್ರಕ್ಕೆ ಈ ಪರಿಯ ಪರವಶತೆಯೇ? ಪ್ರೀತಿಯೋ, ಪ್ರೇಮವೋ ಅದ್ಯಾವುದೋ ಭಾವವೊಂದು ಹೀಗೆ ಹೇಳದೆ ಕೇಳದೆ ಮನದಲ್ಲಿ ಆವಾಹನೆಯಾಗಲು ಸಾಧ್ಯವೇ? ಪ್ರಾಯಕ್ಕೆ ಇಂತದೆಲ್ಲಾ ಸಹಜ ಪ್ರತಿಕ್ರಿಯೆಯೇ? ಅವನನ್ನು ಮತ್ತೆ ಮತ್ತೆ ನೋಡಲು, ಕಣ್ತುಂಬಿಕೊಳ್ಳಲು, ಜೀವ ಹಪಹಪಿಸುವುದೇಕೆ? ಕೈಲಿದ್ದ ಪುಸ್ತಕದ ಪುಟ ತಿರುವಿ ಹಾಕುವ ಅರೆಗಳಿಗೆಯ ಒಂದು ಕ್ರಿಯೆಯಲ್ಲಿ ಕಾವೇರಿ ಅವನಿದ್ದ ಕೋಣೆಯ ಕಡೆ ದಿಟ್ಟಿ ಹರಿಸಿ, ಅವನು ಕೋಣೆಯ ಬಾಗಿಲೀಚೆಗೆ ಬಂದು ನಿಂತಿದ್ದಾನೆ. ಅವಳನ್ನೇ ಗಮನಿಸುತ್ತಿದ್ದಾನೆ. ಕಾವೇರಿ ಬೆದರಿದ್ದಳು. ಬೆವರಿದ್ದಳು. ಅವನ ಕೈಲೂ ನೆಪಕ್ಕೊಂದು ಪುಸ್ತಕ. ಪರವಾಗಿಲ್ಲ. ಜೋರಿದ್ದಾನೆ. ತಾನು ಅಂದುಕೊಂಡಿದ್ದಷ್ಟು ಪುಕ್ಕಲು ಪ್ರಾಣಿಯಲ್ಲ. ಅವನು ಸೀದಾ ಅವಳ ಕಡೆಗೆ ನಡೆದು ಬಂದಿದ್ದ. ಕಾವೇರಿ ಎದ್ದು ನಿಂತಿದ್ದಳು. ಸಣ್ಣಗೆ ಕಂಪಿಸುತ್ತಿರುವ ಕೈಕಾಲುಗಳು. ಮುಖದಲ್ಲಿ ಗಲಿಬಿಲಿ.

"ಕತೆಪುಸ್ತಕ ಓದ್ತಿದೀರಾ?" ಅವನು ಕೆಳದನಿಯಲ್ಲಿ ಕೇಳಿದ್ದ. ಹೂಂಗುಟ್ಟಿದ್ದಳು ಕಾವೇರಿ.

"ತಗೊಳ್ಳಿ, ಇದನ್ನ ಓದಿ. ಚೆನ್ನಾಗುಂಟು..." ಅವನು ಕೈಲಿದ್ದ ಪುಸ್ತಕ ಮುಂದೆ ಮಾಡಿದ್ದ. ಅದು ಯಾವ ಪುಸ್ತಕವೆಂದೂ ಗಮನಿಸದೆ ಕಾವೇರಿ ಕೈ ಮುಂದಕ್ಕೊಡ್ಡಿ, ಬೆರಳುಗಳ ಲಘುಸ್ಪರ್ಶ ಉದ್ದೇಶಪೂರ್ವಕವೋ ಅಥವಾ ಆಕಸ್ಮಿಕವೋ? ಅವನ ಕೈಬೆರಳುಗಳ ತುದಿಯಿಂದ ವಿದ್ಯುತ್‌ಪ್ರವಾಹವೊಂದು ಹರಿದು ಬಂದು ತನ್ನ ಬೆರಳುಗಳ ಮುಖಾಂತರ ಇಡೀ ದೇಹದಲ್ಲಿ ಪ್ರವಹಿಸಿದಂತಾಗಿ, ಕಾವೇರಿ ವಾಸ್ತವವಾಗಿಯೂ ಕಾವೇರಿದ್ದಳು. ಪ್ರೀತಿಯ ಚುಂಬಕಶಕ್ತಿ ಆ ಕ್ಷಣದಲ್ಲಿ ಅವಳನ್ನು ಸಂಪೂರ್ಣವಾಗಿ ವಶವರ್ತಿಯನ್ನಾಗಿಸಿಕೊಂಡುಬಿಟ್ಟಿತ್ತು.

★★★

ನಿಧನಿಧಾನವಾಗಿ ಹೂವೊಂದು ಮೊಗ್ಗಾಗಿ ಅರಳುವಂತೆ, ಆ ಕ್ರಿಯೆ ಪ್ರಕೃತಿಸಹಜವಾಗಿರುವಂತೆ, ಇಬ್ಬರ ನಡುವೆ ಮೂರನೆಯವರ ಗಮನಕ್ಕೆ ಬರದಂತೆ ಮಧುರಭಾವ ಅರಳಿ ನಿಂತಿತ್ತು, ಕಾಲಕ್ರಮೇಣ. ಮೂರನೆಯವರ ಕಣ್ಣು ತಪ್ಪಿಸುವ ಪಾಠವನ್ನು ಕಲಿಸಿಕೊಟ್ಟಿತ್ತು ಯೌವನ. ಅನುಮಾನ ಬಂದಿರಬೇಕು ಹದ್ದಿನ ಕಣ್ಣಿನ ದೊಡ್ಡಮ್ಮನಿಗೆ. ಅವನು ಮನೆಯಲ್ಲಿರುವ ರಜಾದಿನಗಳಲ್ಲಿ ದೊಡ್ಡಮ್ಮ ಮಧ್ಯಾಹ್ನದ ಊಟದ ನಂತರ ನಿದ್ದೆ ಮಾಡುವ ಪರಿಪಾಠ ಬಿಟ್ಟುಹೊಡೆದಿದ್ದಳು. ಮೊಮ್ಮಗಳ ಜೊತೆ ಏನೋ ಕರಟುಪುರಾಣ ತೆಗೆದು ಮಾತಾಡುತ್ತಾ,

"ಹೋಗಿ ಒಂದು ಗಳಿಗೆ ಮಲಗ್ಬಾರ್ದನೇ? ಅದೆಷ್ಟು ಆಕಳಿಸ್ತಿ ನೋಡು..." ಒಳಗಿನ ಚಡಪಡಿಕೆಯನ್ನು ಕಿಂಚಿತ್ತೂ ಹೊರಗೆ ಬಿಟ್ಟುಕೊಡದೆ ಕಾವೇರಿ ಲೋಕಾಭಿರಾಮವಾಗಿ ಹೇಳಿದರೆ,

"ನಿದ್ದೆ ಬಂದ್ರೆ ನಾನೇ ಹೋಗಿ ಮಲಗ್ತೀನಿ. ನಿಂದೇನು ಯಜಮಾನಿಕೆ?" ಅನ್ನುತ್ತಿದ್ದಳು ದೊಡ್ಡಮ್ಮ. ಮೊಮ್ಮಗಳು ಈಚೀಚೆಗೆ ಅಲಂಕಾರದಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತಿರುವುದು ಅವಳ ಗಮನಕ್ಕೆ ಬಂದಿರಬೇಕು. ಗುಮಾನಿ ಶುರುವಾಗಿರಬೇಕು.

"ಮಗಳನ್ನೇನು ಮನೇಲಿಟ್ಕೊಂಡು ಉಪ್ಪಿನಕಾಯಿ ಹಾಕ್ಬೇಕೂಂತಿದೀಯಾ? ಒಂದು ಒಳ್ಳೇ ದಿನ ನೋಡಿ ಜಾತಕ ಹೊರಡಿಸೋ ಯೋಚ್ನೆ ಮಾಡು..." ಅಪ್ಪನ ಕಿವಿ ತಿರುಪಿದ್ದಳು ದೊಡ್ಡಮ್ಮ.